**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 567/2019**

**ಸಾಕ್ಷಿಗೆ ದಿನಾಂಕ 19.2.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಗುರುಸ್ವಾಮಿ | ಪಿ.ಡಬ್ಲ್ಯೂ-15 |
| ತಂದೆಯ/ಗಂಡನ ಹೆಸರು | : | ದೇವಪ್ಪ | ಸಿ.ಡಬ್ಲ್ಯೂ-42 |
| ವಯಸ್ಸು | : | 36 | |
| ಉದ್ಯೋಗ | : | ಎಲೆಕ್ಟ್ರಿಶಿಯನ್ | |
| ವಾಸಸ್ಥಳ | : | ಕೋಹಳ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸ 1 ನನ್ನ ಅಣ್ಣ. ಈ ಪ್ರಕರಣದಲ್ಲಿ ತೀರಿಕೊಂಡ ನಾಗರಾಜು ಚಾಸ 1 ರವರ ಮಗ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿರುತ್ತೇನೆ. ಚಾಸ 1 ರವರು ತನ್ನ ಮಗನಿಗೆ ಅನಾರೋಗ್ಯವಿದುದ್ದರಿಂದ ಚಾಸ 1 ರವರು ಆರೋಪಿಯ ಹಂಪಾಪುರದ ಕ್ಲಿನಿಕ್‌ಗೆ ಕರೆದುಕೊಂಡು ಹೋಗಿ ಇಂಜಕ್ಷನ್ ಕೊಡಿಸಿರುತ್ತಾರೆ. ನಂತರ ಚಾಸ 1 ರವರ ಮಗನಿಗೆ ಇನ್‌ಫೆಕ್ಷನ್ ಆಗಿ ಅವರು ತೀರಿಕೊಂಡಿರುತ್ತಾರೆ. ಚಾಸ 1 ರವರ ಮಗ ತೀರಿಕೊಂಡ ನಂತರ ಅದೆ ದಿನ ನ್ಯಾಯಾಲಯದ ಮುಂದಿರುವ ಆರೋಪಿಯು ಚಾಸ 1 ರವರ ಮನೆಯ ಹತ್ತಿರ ಬಂದು ಜೀವನಾಂಶಕ್ಕೆಂದು 10 ಲಕ್ಷ ನೀಡುವುದಾಗಿ, ಠಾಣೆಗೆ ದೂರು ನೀಡಬಾರದೆಂದು ಹೇಳಿರುತ್ತಾನೆ. ನಂತರ ಊರಿನ ಹಿರಿಯರು ಸೇರಿ ಒಪ್ಪಿಕೊಳ್ಳುವಂತೆ ಚಾಸ 1 ರವರಿಗೆ ಹೇಳಿದ್ದು ಚಾಸ 1 ರವರು ಒಪ್ಪಿಕೊಂಡಿರುತ್ತಾರೆ. ನಂತರ ಆರೋಪಿಯು ಅಷ್ಟು ಹಣ ನೀಡಲು ಈಗ ಹಣ ಇರುವುದಿಲ್ಲ, ತನ್ನ ಹೆಂಡತಿಯ ಹೆಸರಿನಲ್ಲಿರುವ ಮನೆಗೆ ಸಂಬಂಧಿಸಿದಂತೆ ಕರಾರುಪತ್ರ ಮಾಡಿಕೊಡುವುದಾಗಿ ಹೇಳಿರುತ್ತಾನೆ. ಚಾಸ 1 ರವರು ಮಗನ ಜೊತೆ ಆಸ್ಪತ್ರೆಯಲ್ಲಿದುದ್ದರಿಂದ ಆರೋಪಿಯು ನನ್ನ ಹೆಸರಿಗೆ ಕರಾರುಪತ್ರ ಮಾಡಿಕೊಡುವುದಾಗಿ ಹೇಳಿದ್ದು, ನಂತರ ಆರೋಪಿ ಹಾಗೂ ಅವರ ಹೆಂಡತಿ ನೊಂದಣಿ ಕಛೇರಿಗೆ ಬಂದು ನಿಪಿ34 ರಂತೆ ಕರಾರುಪತ್ರವನ್ನು ನನ್ನ ಹೆಸರಿಗೆ ಬರೆದುಕೊಟ್ಟಿರುತ್ತಾರೆ. ಮೂಲ ಕರಾರುಪತ್ರ ಚಾಸ 1 ರವರ ಬಳಿ ಇರಬಹುದು. ನಿಪಿ34 ರಲ್ಲಿರುವ ಎಲ್ಲ ಪುಟಗಳಲ್ಲಿರುವ ಸಹಿಗಳು ಆರೋಪಿ ಮತ್ತು ಅವರ ಹೆಂಡತಿಯ ಸಹಿಗಳಾಗಿದ್ದು, ನೋಂದಣಿ ಸಮಯದಲ್ಲಿ

ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಸದರಿ ನಿಪಿ34 ರಲ್ಲಿರುವ ಭಾವಚಿತ್ರಗಳು ನನ್ನ, ಆರೋಪಿ ಹಾಗೂ ಅವರ ಹೆಂಡತಿಯ ಭಾವಚಿತ್ರವಾಗಿರುತ್ತದೆ. ಆರೋಪಿಯು ನಿಪಿ34 ರಂತೆ ಕರಾರುಪತ್ರದಂತೆ ಕ್ರಯಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಅಥವಾ ಅವರು ಹೇಳಿದಂತೆ 10 ಲಕ್ಷ ಹಣ ನೀಡಿರುವುದಿಲ್ಲ. 6–7 ತಿಂಗಳವರೆಗೆ ಕಾದ ನಂತರ ಆರೋಪಿಯು ಕ್ರಯಪತ್ರ ಬರೆದುಕೊಡಲು ಅಥವಾ ಹಣ ನೀಡದಿದ್ದರಿಂದ ಚಾಸ 1 ರವರು ಪೋಲಿಸ್ ಠಾಣೆಗೆ ದೂರನ್ನು ನೀಡಿರುತ್ತಾರೆ. ಆರೋಪಿಯು ಹಣ ನೀಡುತ್ತೇನೆ, ದೂರು ನೀಡಬಾರದೆಂದು ಹೇಳಿದ್ದರಿಂದ 6 ತಿಂಗಳ ನಂತರ ಚಾಸ 1 ರವರು ದೂರು ನೀಡಿರುತ್ತಾರೆ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ ಕೆ.ಆರ್.ಎಸ್ ವಕೀಲರಿಂದಃ</u>**

ಚಾಸ 1 ರವರ ಮಗನ ಶವ ಸಂಸ್ಕಾರದ ಸಮಯದಲ್ಲಿ ಊರಿನವರು ಸೇರಿದ್ದರು. ಚಾಸ 1 ರವರ ಮಗನ ಶವವನ್ನು ಮಣ್ಣಿನಲ್ಲಿ ಹೂಳಿ ಶವ ಸಂಸ್ಕಾರ ಮಾಡಲಾಗಿರುತ್ತದೆ. ಶವ ಸಂಸ್ಕಾರವನ್ನು ಮನೆಯವರು ಹಾಗೂ ಊರಿನವರು ಸೇರಿ ಮಾಡಿರುತ್ತಾರೆ. ನಾನು ಆರೋಪಿಯ ಹೆಂಡತಿಯಾದ ಲತಾರವರನ್ನು ನೋಡಿರುತ್ತೇನೆ. ನಾನು ಮತ್ತು ಅವರು ನಿಪಿ34 ರಂತೆ ಕ್ರಯದ ಕರಾರುಪತ್ರವನ್ನು ಮಾಡಿಕೊಂಡಿರುತ್ತೇವೆ. ನಿಪಿ34 ರಲ್ಲಿ ದಿನಾಂಕ 27.10.2017 ರಂದು 8 ಲಕ್ಷ ಮತ್ತು 28.10.2017 ರಂದು 2 ಲಕ್ಷ ಹಣವನ್ನು ಪಡೆದುಕೊಂಡಿರುತ್ತೇವೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಆ ರೀತಿ ಹಣ ನೀಡಿರುವುದಿಲ್ಲ ಎನ್ನುವರು. ನಿಪಿ34 ರಲ್ಲಿ 6 ತಿಂಗಳ ಒಳಗೆ ಉಳಿದ 8 ಲಕ್ಷವನ್ನು ಪಡೆದುಕೊಂಡು ಕ್ರಯಪತ್ರ ಬರೆದುಕೊಡಬೇಕೆಂದು ನಮೂದಾಗಿರುತ್ತದೆ ಎಂದರೆ ಸರಿ. 6 ತಿಂಗಳ ನಂತರ ಆರೋಪಿ ಹೆಂಡತಿ ಕ್ರಯಪತ್ರವನ್ನು ಬರೆದುಕೊಟ್ಟಿರುವುದಿಲ್ಲ. 6 ತಿಂಗಳ ಮೊದಲು ಅಥವಾ ನಂತರ ಆರೋಪಿಯ ಹೆಂಡತಿಗೆ ಸದರಿ ಕರಾರುಪತ್ರದ ಬಗ್ಗೆ ನೋಟಿಸನ್ನು ನೀಡಿರುವುದಿಲ್ಲ. ನಿಪಿ34 ರ ಪ್ರಕಾರ ನಾನು ಸಿವಿಲ್ ದಾವೆ ಸಲ್ಲಿಸಲು ಪ್ರಯತ್ನಪಟ್ಟಿರುವುದಿಲ್ಲ. ಆ ರೀತಿ ಸಿವಿಲ್ ದಾವೆ ಸಲ್ಲಿಸಲು ಯಾವುದೇ ತೊಂದರೆ ಇರಲಿಲ್ಲ. 6 ತಿಂಗಳು ಕಳೆದು ಹೋಗಿದ್ದರಿಂದ ನಂತರ ನಾನು ಸಿವಿಲ್ ದಾವೆ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ಚಾಸ 1 ರವರು ಠಾಣೆಗೆ ದೂರು ನೀಡಿರುತ್ತಾರೆ ಎನ್ನುವರು. ನಿಪಿ34 ರಲ್ಲಿ ಚಾಸ 1 ರವರ ಮಗ ತೀರಿಕೊಂಡ ಬಾಬ್ತು ಕರಾರುಪತ್ರ ಮಾಡಿಕೊಂಡಿರುವ ಬಗ್ಗೆ ನಮೂದು ಇರುವುದಿಲ್ಲ. ಆ ರೀತಿ ನಮೂದು ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿದಾರರು ಆರೋಪಿಯು ಆ ರೀತಿ ನಮೂದು ಮಾಡಬಾರದೆಂದು ಹೇಳಿರುತ್ತಾರೆ ಎನ್ನುವರು. ಚಾಸ 1 ರವರ ಮಗ ತೀರಿಕೊಂಡ ವಿಚಾರಕ್ಕೂ ನಿಪಿ34 ಕ್ಕೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ34 ಕರಾರುಪತ್ರವನ್ನು ಆರೋಪಿಯ ಹೆಂಡತಿಗೆ ಸಂಬಂಧಪಟ್ಟ ಮನೆಯನ್ನು ಖರೀದಿ ಮಾಡಲು ನಾನು ಕರಾರುಪತ್ರ ಮಾಡಿಕೊಂಡಿದ್ದು ಚಾಸ 1 ರವರ ಮಗ ತೀರಿಕೊಂಡ ವಿಚಾರಕ್ಕೆ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ34 ರಲ್ಲಿ ಚಾಸ 1 ರವರ ಪರವಾಗಿ ನನಗೆ ಕರಾರುಪತ್ರ ಬರೆದುಕೊಡಲಾಗಿರುತ್ತದೆ ಎಂದು ನಮೂದಾಗಿರುವುದಿಲ್ಲ. ನಾನು ನಿಪಿ34 ರಂತೆ ಆರೋಪಿಯ ಹೆಂಡತಿಯ ವಿರುದ್ಧ ಸಿವಿಲ್ ದಾವೆ ಸಲ್ಲಿಸಲು ಸಾಧ್ಯವಾಗದಿದ್ದರಿಂದ ಸದರಿ ಕರಾರುಪತ್ರವನ್ನು

ಉಪಯೋಗಿಸಿಕೊಂಡು ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಠಾಣೆಗೆ ಹೋಗಿ ನಿಪಿ34 ರಂತೆ ಕರಾರುಪತ್ರ ಆಗಿರುತ್ತದೆ ಎಂದು ಹೇಳಿರುವುದಿಲ್ಲ. ಸಾಕ್ಷಿದಾರರು ಮುಂದುವರಿದು ಚಾಸ 1 ರವರು ಹೇಳಿರುತ್ತಾರೆ ಎನ್ನುವರು. ಈ ಪ್ರಕರಣಕ್ಕೂ ನಿಪಿ34 ಕ್ಕೂ ಯಾವುದೇ ಸಂಬಂಧ ಇರದಿದ್ದರೂ ಆರೋಪಿಗೆ ತೊಂದರೆ ನೀಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ